ಸೂರ್ಯೋದಯ: 6:08 ಸೂರ್ಯಾಸ್ತ : 6:50 ಚಂದ್ರೋದಯ: ಸಂ. 6:38 ಚಂದ್ರಾಸ್ತ: ಬೆ. 6:11 | ಗುರುವಾರದ ಉಷ್ಣಾಂಶ : ಗರಿಷ್ಠ 37° ಕನಿಷ್ಠ 23°
ಶುಕ್ರವಾರದ ಉಷ್ಣಾಂಶ 37° ಗರಿಷ್ಠ 23° ಕನಿಷ್ಠ | ಶನಿವಾರ 37° : 22° | ಭಾನುವಾರ 37° : 22° | ಸೋಮವಾರ 37° : 22°
ಹವಾಮಾನ ಮುನ್ಸೂಚನೆ: ಜಿಲ್ಲೆಯಾದ್ಯಂತ ಬಿಸಿಲಿನ ವಾತಾವರಣ ಇರಲಿದೆ
ಶುಕ್ರವಾರ • ಮೇ 1, 2026
ಪ್ರಜಾವಾಣಿ

ಚುಟುಕು ಸುದ್ದಿ

ರಥೋತ್ಸವ ಇಂದು

ಮೂಡಲಗಿ: ತಾಲ್ಲೂಕಿನ ಹುಣಶ್ಯಾಳ ಪಿವೈ ಮತ್ತು ಹೊಸಟ್ಟಿ ಅವಳಿ ಗ್ರಾಮಗಳಲ್ಲಿ ಜಂಟಿಯಾಗಿ ಜಡಿಸಿದ್ಧೇಶ್ವರ ರಥೋತ್ಸವ ಮೇ 1ರಂದು ನಡೆಯಲಿದೆ.

ಜಾತ್ರೆ ಅಂಗವಾಗಿ ಸನ್ನಿಧಿಗೆ ರುದ್ರಾಭಿಷೇಕ, ಪುಷ್ಪಾಲಂಕೃತ ಪೂಜೆ, ನೈವೇದ್ಯ ಸಮರ್ಪಣೆ ಜರುಗುವುದು. ಸಂಜೆ 6ಕ್ಕೆ ವಿವಿಧ ವಾದ್ಯಗಳೊಂದಿಗೆ ರಥೋತ್ಸವ ನಡೆಯಲಿದೆ. ಅನ್ನಸಂತರ್ಪಣೆ ನಡೆಯಲಿದೆ ಎಂದು ಜಾತ್ರಾ ಸಮಿತಿ ತಿಳಿಸಿದೆ.

ಆರೋಗ್ಯ ತಪಾಸಣಾ ಶಿಬಿರ ಇಂದಿನಿಂದ

ಹಿರೇಬಾಗೆವಾಡಿ: ಗ್ರಾಮದ ಬಸವನಗರದಲ್ಲಿನ ಲೋಟಸ್ ಆಸ್ಪತ್ರೆಯಲ್ಲಿ ಮೇ 1ರಿಂದ ಮೇ 7ರವರೆಗೆ ಬೆಳಿಗ್ಗೆ 10 ರಿಂದ ಸಂಜೆ 5ರವರೆಗೆ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ.

ಸಾಮಾನ್ಯ ತಪಾಸಣೆ, ರಕ್ತದೊತ್ತಡ, ಸಕ್ಕರೆ ಕಾಯಿಲೆ, ಹೃದಯ ರೋಗ, ರಕ್ತಹೀನತೆ, ಕಾಮಾಲೆ, ಅಸ್ತಮಾ, ಲಿವರ್, ಮೂತ್ರಪಿಂಡದ ಸಮಸ್ಯೆ, ನಿದ್ರಾಹೀನತೆ, ಸಂಧಿವಾತ, ಕುತ್ತಿಗೆ ನೋವು, ಬೆನ್ನು ನೋವು, ಮೂಳೆ ಸಾಂದ್ರತೆ, ಚರ್ಮರೋಗ, ಪಾರ್ಶ್ವವಾಯು, ಎಲುಬು ಕೀಲುಗಳ ತಪಾಸಣೆ, ಊತ, ಮೊಣಕಾಲು ನೋವು, ಥೈರಾಯ್ಡ್ ಸಮಸ್ಯೆ, ಗುಪ್ತ ಮತ್ತು ಲೈಂಗಿಕ ರೋಗಗಳ ಸಮಸ್ಯೆಗಳಿಗೆ ನುರಿತ ವೈದ್ಯರಿಂದ ಚಿಕಿತ್ಸೆ ದೊರೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಅತಿಕ್ರಮಣ ತೆರವು: ಮತ್ತಷ್ಟು ಚುರುಕು

ಸಾರ್ವಜನಿಕರ ಸಂಚಾರಕ್ಕೆ ಅಡ್ಡಿಯಾಗಿದ್ದ ವಸ್ತುಗಳ ತೆರವು, ವ್ಯಾಪಾರಿಗಳಿಗೂ ತಾಕೀತು

ಪ್ರಜಾವಾಣಿ ವಾರ್ತೆ

ಬೆಳಗಾವಿ: ನಗರದಲ್ಲಿ ಅತಿಕ್ರಮಣ ತೆರವು ಇನ್ನಷ್ಟು ಬಿರುಸುಗೊಳಿಸಿದ ಪಾಲಿಕೆ ಅಧಿಕಾರಿಗಳು, ಗುರುವಾರ ಕೂಡ ವಿವಿಧ ಪ್ರಮುಖ ರಸ್ತೆಗಳಲ್ಲಿ ಬೇಕಾಬಿಟ್ಟಿಯಾಗಿ ಅತಿಕ್ರಮಣ ಮಾಡಿದವರ ವಿರುದ್ಧ ಕ್ರಮ ಜರುಗಿಸಿದರು. ಸಾರ್ವಜನಿಕ ಸ್ಥಳದಲ್ಲಿ ಇಟ್ಟಿದ್ದ ವಸ್ತುಗಳನ್ನು ಎತ್ತಿಕೊಂಡು ಹೋಗಿ ಅತಿಕ್ರಮಣ ಮಾಡಿದವರ ಬಾಗಿಲ ಮುಂದೆ ಎಸೆದರು.

ಬುಧವಾರ ರಾಣಿ ಚನ್ನಮ್ಮ ವೃತ್ತದಲ್ಲಿ ಹಾಕಿದ ಅನಧಿಕೃತ ಫಲಕಗಳನ್ನು ಅಧಿಕಾರಿಗಳು ತೆರವು ಮಾಡಿದ್ದರು. ಚನ್ನಮ್ಮ ವೃತ್ತ, ಧರ್ಮವೀರ ಸಂಭಾಜಿ ವೃತ್ತ, ಶ್ರೀಕೃಷ್ಣದೇವರಾಯ ವೃತ್ತ, ಬಸ್ ನಿಲ್ದಾಣ ಸೇರಿದಂತೆ ಹಲವು ಕಡೆಗಳನ್ನು ಖಾಸಗಿ ಕಂಪನಿಗಳು ಬೇಕಾಬಿಟ್ಟಿ ಜಾಹೀರಾತು ಫಲಕಗಳನ್ನು ಹಾಕಿದ್ದವು. ಅವುಗಳನ್ನು ಒಂದೇ ದಿನದಲ್ಲಿ ತೆರವು ಮಾಡಿ ನಗರದ ಸೌಂದರ್ಯಕ್ಕೆ ಬಂದಿದ್ದ ಚ್ಯುತಿ ನಿಯಂತ್ರಿಸಿದರು.

ಗುರುವಾರ ಮತ್ತೆ ಇಲ್ಲಿನ ಕ್ಲಬ್ ರಸ್ತೆಯಲ್ಲಿ ಜೆಸಿಬಿಗಳು ಸದ್ದು ಮಾಡಿದವು. ಗಿರಿಯಾಸ್ ಎಲೆಕ್ಟ್ರಾನಿಕ್ ಮಾರಾಟ ಮಳಿಗೆಯವರು, ರಸ್ತೆಯ ಮೇಲೆ ಸಾರ್ವಜನಿಕರ ಸಂಚಾರಕ್ಕೆ ತೊಂದರೆ ಆಗುವಂತೆ ಹಾಕಿದ್ದ ಎಲೆಕ್ಟ್ರಾನಿಕ್ ವಸ್ತುಗಳನ್ನು ಜೆಸಿಬಿಯಿಂದ ಎತ್ತಿಕೊಂಡು ಅವರ ಮಳಿಗೆ ಮುಂದೆಯೇ ಬಿಸಾಕಿದರು. ಹಳೆಯ ಫ್ರಿಡ್ಜ್, ಟ್ರಜರಿ, ವಾಷಿಂಗ್ ಮಷಿನ್‌ಗಳನ್ನು 'ಎಕ್ಸ್‌ಚೇಂಜ್' ಸಲುವಾಗಿ ತಂದು ಇಡಲಾಗಿತ್ತು. ಇವುಗಳನ್ನು ರಸ್ತೆ ಮೇಲೆಯೇ ಇಟ್ಟು ಜನ ಸಂಚಾರಕ್ಕೆ ಅಡಚಣೆ ಮಾಡಲಾಗಿತ್ತು. ಎಚ್ಚರಿಕೆ ನೀಡಿದರೂ ಮಳಿಗೆಯವರು ಎಚ್ಚೆತ್ತುಕೊಳ್ಳಲಿಲ್ಲ. ಇದರಿಂದ ಪಾಲಿಕೆ ಕಾರ್ಯಾಚರಣೆ ನಡೆಸಿತು.

ಪಾಲಿಕೆ ಉಪ ಆಯುಕ್ತೆ ರೇಷ್ಮಾ ನಿಪ್ಪಾಣಿಕರ ಮುಂದಾಳತ್ವದಲ್ಲಿ ಪಾಲಿಕೆ ಸಿಬ್ಬಂದಿ ಹಾಗೂ ಪೊಲೀಸರು ಅತಿಕ್ರಮಣ ತೆರವು ಮಾಡಿದರು. ಈ ವೇಳೆ ಗುತ್ತಿಗೆದಾರರು ಪಾಲಿಕೆ ಅಧಿಕಾರಿಗಳ ಜತೆಗೆ ವಾಗ್ವಾದ ನಡೆಸಿದರು.

ಬಳಿಕ ರಸ್ತೆ ಪಕ್ಕದಲ್ಲಿ ತಳ್ಳುವ ಗಾಡಿಗಳ ಮೇಲೆ ಇಟ್ಟಿದ್ದ ತರಕಾರಿ, ಹಣ್ಣು ಮತ್ತಿತರ ಮಾರಾಟಗಾರರನ್ನೂ ತೆರವು ಮಾಡಿದರು. ಎಷ್ಟು ಸಾರಿ ಎಚ್ಚರಿಕೆ ಕೊಟ್ಟರೂ ವ್ಯಾಪಾರಿಗಳು ಬೆಲೆ ಕೊಡದ ಕಾರಣ ತಳ್ಳುವ ಗಾಡಿಗಳನ್ನು ಜೆಸಿಬಿಯಿಂದ ಮುರಿದುಹಾಕಿ, ತೆರವು ಮಾಡಬೇಕಾಯಿತು.



ಬೆಳಗಾವಿಯ ಕ್ಲಬ್ ರಸ್ತೆಯಲ್ಲಿ ಅತಿಕ್ರಮಣ ಮಾಡಿ ಇಟ್ಟಿದ್ದ ಎಲೆಕ್ಟಾನಿಕ್ ವಸ್ತುಗಳನ್ನು ಪಾಲಿಕೆ ಅಧಿಕಾರಿಗಳು ಗುರುವಾರ ಜೆಸಿಬಿ ಬಳಸಿ ತೆರವು ಮಾಡಿದರು

ತೆರವಾಗದ ಬೃಹತ್ ಕಟ್ಟಡ: ನಗರದ ಮಾರುತಿ ಗಲ್ಲಿಯಲ್ಲಿ ನಿಯಮ ಬಾಹಿರವಾಗಿ ಕಟ್ಟಿದ್ದ ವಾಣಿಜ್ಯ ಕಟ್ಟಡವನ್ನು ಮಹಾನಗರ ಪಾಲಿಕೆ ಅಧಿಕಾರಿಗಳು ಈಚೆಗೆ ತೆರವುಗೊಳಿಸಲು ಮುಂದಾಗಿದ್ದರು. ಶಿವಾಜಿರಾವ್ ಹೈಬತ್ತಿ ಎಂಬುವವರಿಗೆ ಸೇರಿದ ವಾಣಿಜ್ಯ ಕಟ್ಟಡ ನಿರ್ಮಾಣದಲ್ಲಿ ನಿಯಮ ಪಾಲನೆ ಮಾಡಿಲ್ಲ ಎಂದು ಶರೀಫ್ ಮುಲ್ಲಾ ಅವರು ಪಾಲಿಕೆ ಆಯುಕ್ತರಿಗೆ ಹಾಗೂ ಲೋಕಾಯುಕ್ತರಿಗೆ ದೂರು ನೀಡಿದ್ದರು. ಈ ಬಗ್ಗೆ ವಿಚಾರಣೆ ಮಾಡಿದ್ದ ಲೋಕಾಯುಕ್ತ ಅಧಿಕಾರಿಗಳು, ಒಂದು ವಾರದಲ್ಲಿ ಅನಧಿಕೃತ ಕಟ್ಟಡ ತೆರವುಗೊಳಿಸುವ ಕ್ರಮದ ಬಗ್ಗೆ ಮಾಹಿತಿ ನೀಡಲು ಆಯುಕ್ತರಿಗೆ ಇತ್ತೀಚೆಗೆ ಸೂಚನೆ ನೀಡಿದ್ದರು. ಹೀಗಾಗಿ ಪಾಲಿಕೆ ಅಧಿಕಾರಿಗಳು, ಮೂರು ಜೆಸಿಬಿ ಯಂತ್ರಗಳಿಂದ ಮಾರುತಿ ಗಲ್ಲಿಯಲ್ಲಿನ ಐದು ಮಹಡಿಯ ವಾಣಿಜ್ಯ ಕಟ್ಟಡದ ತೆರವು ಕಾರ್ಯಾಚರಣೆಗೆ ಮುಂದಾದರು. ಮಾಲೀಕರು ತಕರಾರು ಮಾಡಿದ್ದರಿಂದ ಈ ಕಟ್ಟಡ ತೆರವು ಅರ್ಧಕ್ಕೆ ನಿಂತಿದೆ.

ಪಾಲಿಕೆ ಸಭೆಯಲ್ಲೇ ಪ್ರತಿಧ್ವನಿ

ನಗರದ ಶಿಸ್ತು, ಸೌಂದರ್ಯ ಕಾಪಾಡುವುದು ಹಾಗೂ ಸಂಚಾರ ಸಂಕಷ್ಟ ದೂರ ಮಾಡುವ ಉದ್ದೇಶದಿಂದ ಎಲ್ಲ ಕಡೆಯ ಒತ್ತುವರಿ ತೆರವು ಮಾಡಬೇಕು. ಈ ಬಗ್ಗೆ ಯಾವುದೇ ಮುನ್ಸೂಚನೆ ನೋಟಿಸ್ ಕೂಡ ನೀಡುವ ಅಗತ್ಯವಿಲ್ಲ. ಏ.14ರ ಬಳಿಕ ಕಾರ್ಯಾಚರಣೆ ಆರಂಭಿಸಬೇಕು ಎಂಬ ನಿರ್ಣಯವನ್ನು, ಇಲ್ಲಿನ ಮಹಾನಗರ ಪಾಲಿಕೆಯಲ್ಲಿ ಈಚೆಗೆ ನಡೆದ ಸ್ಥಾಯಿ ಸಮಿತಿಗಳ ಸಭೆಯಲ್ಲಿ ಕೈಗೊಳ್ಳಲಾಗಿತ್ತು.

ಮೇಯರ್ ಪ್ರೀತಿ ಕಾಮಕರ ಸಮ್ಮುಖದಲ್ಲಿ ಸ್ಥಾಯಿ ಸಮಿತಿಗಳ ಮುಖಂಡರು ಹಾಗೂ ಬಹುಪಾಲು ಎಲ್ಲ ಸದಸ್ಯರೂ ಒಕ್ಕೊರಲಿನಿಂದ ಧ್ವನಿ ಎತ್ತಿದ್ದರು. ಇದೇ ವಿಷಯ ಪ್ರತಿ ಬಾರಿಯೂ ಪಾಲಿಕೆ ಸಭೆಯಲ್ಲಿ ಪ್ರತಿಧ್ವನಿಸಿತ್ತು.

ಸುದ್ದಿ 2 ನಿಮಿಷ

ವಿಶೇಷ ಕಾರ್ಯಾಗಾರ 12ರಂದು

ರಾಯಬಾಗ: ಪಟ್ಟಣದ ವಿಶ್ವಚೇತನ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿ ಮೇ 12ರಂದು ಪಾಲಕರಿಗಾಗಿ ಉಚಿತ ವಿಶೇಷ ಕಾರ್ಯಾಗಾರ ಆಯೋಜಿಸಲಾಗಿದೆ.

ಋಷಿ ಶಿಕ್ಷಣ ಸಂಸ್ಥೆಯಿಂದ ನಡೆಯುವ ಈ ಕಾರ್ಯಕ್ರಮದಲ್ಲಿ ಹುಬ್ಬಳ್ಳಿಯ ಮನೋವೈದ್ಯಕೀಯ ಸಲಹೆಗಾರ ಹಾಗೂ ಆಪ್ತ ಸಮಾಲೋಚಕ ಡಾ.ಗುರುರಾಜ ಪಾಟೀಲ ಅವರು ಉಪನ್ಯಾಸ ನೀಡಲಿದ್ದಾರೆ.

'ಮಕ್ಕಳ ಬೆಳವಣಿಗೆಯಲ್ಲಿ ಪಾಲಕರ ಪಾತ್ರ' ಮತ್ತು 'ಶಿಕ್ಷಣದಲ್ಲಿ ಪಾಲಕರ ದೃಷ್ಟಿಕೋನ' ಎಂಬ ವಿಷಯದ ಕುರಿತು ಕಾರ್ಯಾಗಾರ ನಡೆಯಲಿದ್ದು, ರಾಯಬಾಗ ತಾಲ್ಲೂಕಿನ ಎಲ್ಲಾ ಪಾಲಕರು ಪಾಲ್ಗೊಳ್ಳಬಹುದು.

ಡಾ.ಗುರುರಾಜ ಪಾಟೀಲ ಅವರು ಇಂದಿನ ಪರಿಸ್ಥಿತಿಯಲ್ಲಿ ಪಾಲಕರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳ ಕುರಿತು ನೇರ ಸಂವಾದ ನಡೆಸಲಿದ್ದಾರೆ. ಮಕ್ಕಳು ಮಾತು ಕೇಳದಿರುವುದು, ಶಿಕ್ಷಣ ಹಾಗೂ ಅಭ್ಯಾಸದಲ್ಲಿ ಉಂಟಾಗುವ ತೊಂದರೆಗಳು, ಅತಿಯಾದ ಮೊಬೈಲ್ ಬಳಕೆಯಿಂದ ಮಕ್ಕಳ ಮೇಲೆ ಬೀರುವ ಕೆಟ್ಟ ಪರಿಣಾಮಗಳು ಹಾಗೂ ಅದರ ಪರಿಹಾರ, ಮಕ್ಕಳ ನಡುವಳಿಕೆಯಲ್ಲಿ ಕಾಣಿಸಿಕೊಳ್ಳುವ ಬದಲಾವಣೆಗಳ ಕುರಿತು ಮಾರ್ಗದರ್ಶನ ನೀಡಲಿದ್ದಾರೆ.

'ಕಾರ್ಯಾಗಾರದಲ್ಲಿ ಭಾಗವಹಿಸಲು ನೋಂದಣಿ ಕಡ್ಡಾಯವಾಗಿದ್ದು, ಆಸಕ್ತ ಪಾಲಕರು ಮೊ.ಸಂ: 6361636934 ಹಾಗೂ 8884216838 ಮೂಲಕ ಹೆಸರು ನೋಂದಾಯಿಸಿಕೊಳ್ಳಬಹುದು' ಎಂದು ಶಾಲೆಯ ಸಂಸ್ಥಾಪಕ ಅಧ್ಯಕ್ಷ ಚೇತನ ನಾಯಿಕ ಹಾಗೂ ಮುಖ್ಯಶಿಕ್ಷಕಿ ವಿದ್ಯಾ ನಾಯಿಕ ತಿಳಿಸಿದ್ದಾರೆ.

'ಜಾಗೃತರಾದರೆ ಸಮಾನತೆ ಸಾಧ್ಯ'

ಚಿಕ್ಕೋಡಿ: 'ಸಮಾಜದಲ್ಲಿ ಅಸ್ಪೃಶ್ಯತೆ ನಿವಾರಣೆಗೆ ಶಿಕ್ಷಣ ಹಾಗೂ ಪ್ರಜ್ಞೆ ಬೆಳೆಸಿಕೊಳ್ಳಬೇಕು. ಸಂವಿಧಾನಾತ್ಮಕ ಹಕ್ಕು ಪಡೆದುಕೊಂಡು ಜಾಗೃತರಾದರೆ ಸಮಾನತೆ ನೆಲೆಸಲು ಸಾಧ್ಯ' ಎಂದು ನಿಪ್ಪಾಣಿ ಸಿಪಿಐ ಬಿ.ಎಸ್.ತಳವಾರ ಹೇಳಿದರು.

ನಿಪ್ಪಾಣಿ ತಾಲ್ಲೂಕಿನ ಲಖನಾಪೂರ ಗ್ರಾಮದಲ್ಲಿ ಗಡಿನಾಡು ಸಾಹಿತ್ಯ ಮತ್ತು ಸಾಂಸ್ಕೃತಿಕ ಟ್ರಸ್ಟ್ ಸಹಯೋಗದಲ್ಲಿ ಈಚೆಗೆ ಹಮ್ಮಿಕೊಂಡಿದ್ದ ಅಂಬೇಡ್ಕರ್ ಗೀತಗಾಯನ ಕಾರ್ಯಕ್ರಮ ಉದ್ಘಾಟಿಸಿದ ಅವರು, 'ಸಮಾಜದ ಏಳ್ಗೆಗಾಗಿ ಪ್ರತಿಯೊಬ್ಬರೂ ಕಂಕಣಬದ್ಧರಾಗಿ ದುಡಿಯಬೇಕು. ಸಮಾಜದ ಏಳ್ಗೆಯೊಂದಿಗೆ ಸ್ವ ಏಳ್ಗೆಯೂ ಆಗುತ್ತದೆ ಎಂಬ ಅರಿವು ಇರಬೇಕು' ಎಂದರು.

ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ದಲಿತ ಕ್ರಾಂತಿಸೇನಾ ರಾಜ್ಯ ಅಧ್ಯಕ್ಷ ಅಶೋಕಕುಮಾರ ಅಸೋದೆ, '12ನೇ ಶತಮಾನದಲ್ಲಿ ಬಸವಾದಿ ಶರಣರು ತಮ್ಮ ವಚನಗಳ ಮೂಲಕ ಸಮಾಜದಲ್ಲಿ ಸಮಾನತೆಯ ಬೀಜ ಬಿತ್ತಿದರು. ಸರ್ವಧರ್ಮ ಸಮನ್ವಯ ದೃಷ್ಟಿಯಲ್ಲಿ ಎಲ್ಲರೊಳಗೊಂದಾಗಿ ಬಾಳ್ವೆ ಮಾಡುವುದು ಅವಶ್ಯ' ಎಂದು ತಿಳಿಸಿದರು.

ಶಶಿಕಾಂತ ಜಂಗಿ ತಂಡ ವಚನ ಗಾಯನ ಹಾಗೂ ಚಿಕ್ಕೋಡಿಯ ಆಶಾದೀಪ ಸಮುದಾಯ ಕಲಾಕೇಂದ್ರ ತಂಡ ಜಾಗೃತಿ ಗಾಯನ ಮಾಡಿದರು. ಕಲಾವಿದರನ್ನು ಸನ್ಮಾನಿಸಿ ಗೌರವಿಸಲಾಯಿತು.

ನಿಪ್ಪಾಣಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಈರಣ್ಣ ಶಿರಗಾಂವೆ, ಲಕ್ಷ್ಮೀ ಮಗದುಮ್ಮ, ಮಲ್ಲಿಕಾರ್ಜುನ ಶಿಂಧೆ, ಅಪ್ಪಾಸಾಹೇಬ ಕೇಸರಕರ, ಜಯಶ್ರೀ ಲಾಟಕರ, ರಾಜು ನಾಯಿಕ, ಭಾವನಾ ಶಾಸ್ತ್ರಿ, ಗಜಾನನ ನಾಯಿಕ ಇದ್ದರು.

ಪಾಟೀಲ ಶಿಕ್ಷಣ ಸಂಸ್ಥೆ: ಶೇ 100 ಫಲಿತಾಂಶ

ರಾಯಬಾಗ: ತಾಲ್ಲೂಕಿನ ಬ್ಯಾಕುಡ ಗ್ರಾಮದಲ್ಲಿರುವ ಎ.ಎ.ಪಾಟೀಲ ಶಿಕ್ಷಣ ಸಂಸ್ಥೆಯ ಇಂಗ್ಲಿಷ್ ಮಾಧ್ಯಮ ಪ್ರೌಢಶಾಲೆಯು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ 100ರಷ್ಟು ಫಲಿತಾಂಶ ದಾಖಲಿಸಿದೆ. ಋತುರಾಜ ಬಳ್ಳೊಳ್ಳಿ ಶೇ 86, ರಾಧಿಕಾ ಮಾಚಕನೂರ ಶೇ 84 ಹಾಗೂ ಸುಕನ್ಯಾ ಕಾಲಗೆ ಶೇ 78ರಷ್ಟು ಅಂಕಗಳನ್ನು ಪಡೆದಿದ್ದಾರೆ.

ಸ್ಥಳೀಯ ಸುದ್ದಿಗಳಿಗೆ ಪುಟ 4A, 4B ನೋಡಿ

ಜನಿವಾರಕ್ಕೆ ಅವಮಾನ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಪರೀಕ್ಷೆ ವೇಳೆ ಬಲವಂತವಾಗಿ ವಿದ್ಯಾರ್ಥಿಗಳಿಂದ ಜನಿವಾರ ತೆಗೆಸಿದ ಪ್ರಕರಣದ ಕುರಿತು ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಅಖಿಲ ಭಾರತೀಯ ಬ್ರಾಹ್ಮಣ ಮಹಾ ಸಂಘದ ಜಿಲ್ಲಾ ಘಟಕದಿಂದ ನಗರದಲ್ಲಿ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಬೆಂಗಳೂರಿನ ಮಡಿವಾಳದ ಕೃಪಾನಿಧಿ ಕಾಲೇಜು ಹಾಗೂ ಚಿಕ್ಕಬಳ್ಳಾಪುರದ ನಾಗಾರ್ಜುನ ಕಾಲೇಜು ಸಿಇಟಿ ಪರೀಕ್ಷಾ ಕೇಂದ್ರಗಳಲ್ಲಿ ಉದ್ದೇಶಪೂರ್ವಕವಾಗಿ ಜನಿವಾರ ತೆಗೆಸಲಾಗಿದೆ. ಈ ಪರೀಕ್ಷೆ ಕೇಂದ್ರಗಳ ವಿರುದ್ಧ ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ ರಚಿಸಿ ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.

ಘಟನೆಗೆ ಹೊಣೆಗಾರರಾದ ಕಾಲೇಜುಗಳ ಪ್ರಾಚಾರ್ಯರು, ಮೇಲ್ವಿಚಾರಕರು, ಭದ್ರತಾ ಸಿಬ್ಬಂದಿ ಸೇರಿದಂತೆ ಸಂಬಂಧಪಟ್ಟ ಅಧಿಕಾರಿಗಳನ್ನು ಅಮಾನತು ಮಾಡಬೇಕು. ಪರೀಕ್ಷೆಯಲ್ಲಿ ತೊಂದರೆ ಅನುಭವಿಸಿದ ವಿದ್ಯಾರ್ಥಿಗಳಿಗೆ ವಿಶೇಷ ಪರಿಹಾರ ಕ್ರಮ ಜರುಗಿಸಬೇಕು. ಈ ಸಿಇಟಿ ಪರೀಕ್ಷೆ ನಡೆಸುತ್ತಿರುವ ಆಯುಕ್ತರನ್ನು ಅಮಾನತುಗೊಳಿಸಿ, ಜವಾಬ್ದಾರಿಯುತ ಹೊಸ ಆಯುಕ್ತರನ್ನು ನೇಮಕ ಮಾಡಬೇಕು. ಮುಂದಿನ ದಿನಗಳಲ್ಲಿ ಯಾವುದೇ ಪರೀಕ್ಷೆ ಕೇಂದ್ರಗಳಲ್ಲಿ ವಿದ್ಯಾರ್ಥಿಗಳ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟಾಗದಂತೆ ಸ್ಪಷ್ಟ ಮಾರ್ಗಸೂಚಿಗಳನ್ನು ಹೊರಡಿಸಬೇಕು ಎಂದೂ ಮನವಿಯಲ್ಲಿ ಒತ್ತಾಯಿಸಿದ್ದಾರೆ.

ಬ್ರಾಹ್ಮಣ ಸಮುದಾಯದವರಿಗೆ ಜನಿವಾರವು ಕೇವಲ ದಾರವಲ್ಲ; ಅದು ಧಾರ್ಮಿಕ ನಂಬಿಕೆ, ಸಂಸ್ಕೃತಿ ಸಂಪ್ರದಾಯ ಆಚರಣೆ ಹಾಗೂ ಆತ್ಮ ಗೌರವದ ಪ್ರತೀಕವಾಗಿದೆ. ಇಂತಹ ಧಾರ್ಮಿಕ ಗುರುತನ್ನು ಬಲವಂತವಾಗಿ ತೆಗೆಸುವುದು ಸಂವಿಧಾನ ನೀಡಿರುವ ಧಾರ್ಮಿಕ ಸ್ವಾತಂತ್ರ್ಯ, ವೈಯಕ್ತಿಕ ಗೌರವ ಹಾಗೂ ಮೂಲಹಕ್ಕುಗಳ ಉಲ್ಲಂಘನೆಯಾಗಿದೆ. ಅದಲ್ಲದೆ, ಈ ಘಟನೆ ಸಂದರ್ಭದಲ್ಲಿ ಕೆಲ ವಿದ್ಯಾರ್ಥಿಗಳು ತೀವ್ರ ಮಾನಸಿಕ ಒತ್ತಡಕ್ಕೆ ಒಳಗಾಗಿದ್ದು, ಇದರಿಂದ ವಿದ್ಯಾರ್ಥಿಗಳ ವಿದ್ಯಾಭ್ಯಾಸ, ಭವಿಷ್ಯ ಹಾಗೂ ವೃತ್ತಿ ಜೀವನದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಇದೆ. ಆದ್ದರಿಂದ ಸರ್ಕಾರ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಎಂದು ಮನವಿಯಲ್ಲಿ ಆಗ್ರಹಿಸಿದರು.

ಸಂಘಟನೆಯ ಜಿಲ್ಲಾ ಘಟಕದ ಅಧ್ಯಕ್ಷ ಜಯತೀರ್ಥ ಸವದತ್ತಿ, ಮುಖಂಡರಾದ ವೆಂಕಟೇಶ ದೇಶಪಾಂಡೆ, ಡಿ.ಆರ್. ಪಾಟೀಲ, ಎಂ.ಎನ್. ಪ್ರಯಾಗ, ಆರ್. ವಿ.ದೇಶಪಾಂಡೆ ನೇತೃತ್ವ ವಹಿಸಿದ್ದರು.

ಅಖಿಲ ಭಾರತೀಯ ಬ್ರಾಹ್ಮಣ ಮಹಾ ಸಂಘದ ಜಿಲ್ಲಾ ಘಟಕದಿಂದ ಬೆಳಗಾವಿಯಲ್ಲಿ ಗುರುವಾರ ಪ್ರತಿಭಟನೆ ನಡೆಸಲಾಯಿತು

'ನಿಸ್ವಾರ್ಥ ಸೇವೆಯಿಂದ ಮಠಗಳು ಬೆಳೆಯಲು ಸಾಧ್ಯ'

ಯರಗಟ್ಟಿ: 'ಭಕ್ತರು ತನು, ಮನ, ಧನಗಳಿಂದ ನಿಸ್ವಾರ್ಥ ಸೇವೆ ಸಲ್ಲಿಸಿದರೆ ಮಠಗಳು ಬೆಳೆಯಲು ಸಾಧ್ಯ' ಎಂದು ಶಾಸಕ ವಿಶ್ವಾಸ್ ವೈದ್ಯ ಹೇಳಿದರು.

ಪಟ್ಟಣದ ಗೋಕಾಕ ರಸ್ತೆ ಪಕ್ಕದಲ್ಲಿರುವ ರಾಜರಾಜೇಶ್ವರಿ ಆಶ್ರಮದ ಜಾತ್ರಾ ಮಹೋತ್ಸವದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ದೇವಿಯ ಮಂದಿರದ ಅಭಿವೃದ್ಧಿಗಾಗಿ ಗಣಪತಿ ಶ್ರೀಗಳ ಶ್ರಮ ಅಪಾರವಾಗಿದೆ' ಎಂದರು.

ಶಿಂದೋಗಿ ಮಠದ ಮುಕ್ತಾನಂದ ಸ್ವಾಮೀಜಿ ಮಾತನಾಡಿ, 'ಪ್ರಕೃತಿಯಲ್ಲಿರುವ ಸಕಲ ಜೀವರಾಶಿಯಲ್ಲಿಯೇ ಮನುಷ್ಯನಿಗೆ ಶ್ರೇಷ್ಠ ಸ್ಥಾನವಿದೆ. ಅಂತಹ ಜೀವನವನ್ನು ವ್ಯರ್ಥವಾಗಿ ಕಳೆಯದೇ ಸತ್ಸಂಗದಲ್ಲಿ ಬೆರೆತು ಜೀವನ ಸಾರ್ಥಕ ಮಾಡಿಕೊಳ್ಳಬೇಕು' ಎಂದರು.

ರಾಜರಾಜೇಶ್ವರಿ ಮಠದ ಗಣಪತಿ ಸ್ವಾಮೀಜಿ, ಬಳ್ಳಾರ-ಹಂಪಿ-ಚಿಕ್ಕಮುನವಳ್ಳಿ ಮಠದ ವಿದ್ಯಾನಂದ ಭಾರತೀ ಸ್ವಾಮೀಜಿ, ಮುನವಳ್ಳಿ ಮಠದ ಮುರಘರಾಜೇಂದ್ರ ಸ್ವಾಮೀಜಿ, ಹಡಗಿನಾಳ ಮಠದ ಮಲ್ಲೇಶ ಶರಣರು, ತಹಶೀಲ್ದಾರ್ ಎಂ.ವಿ.ಗುಂಡಪ್ಪಗೋಳ, ಬೆಳಗಾವಿ ವೈದ್ಯ ರವಿ ಪಾಟೀಲ ಇದ್ದರು.

ವಿವಿಧ ಕ್ಷೇತ್ರಗಳ ಸಾಧಕರು ಮತ್ತು ದಾನಿಗಳನ್ನು ಸನ್ಮಾನಿಸಲಾಯಿತು.

ಯರಗಟ್ಟಿ ರಾಜಜೇಶ್ವರಿ ಮಠದ ಜಾತ್ರಾ ಮಹೋತ್ಸವದ ಅಂಗವಾಗಿ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು

ರವಿವಾರ ಪೇಟೆ, ಕಲ್ಮಠ ರಸ್ತೆ ಏಕಮುಖ ಸಂಚಾರ

ಬೆಳಗಾವಿ: ನಗರದಲ್ಲಿ ಸಂಚಾರ ವ್ಯವಸ್ಥೆ ಸುಗಮಗೊಳಿಸುವ ಉದ್ದೇಶದಿಂದ ನಗರ ಪೊಲೀಸ್ ಆಯುಕ್ತ ಭೂಷಣ ಬೊರಸೆ ಅವರು ರವಿವಾರ ಪೇಟೆ ಹಾಗೂ ಕಲ್ಮಠ ರಸ್ತೆಗಳಲ್ಲಿ ಏಕಮುಖ ಸಂಚಾರ ವ್ಯವಸ್ಥೆ ಜಾರಿಗೊಳಿಸಿದ್ದಾರೆ.

ರವಿವಾರ ಪೇಟೆ ಹಾಗೂ ಕಲ್ಮಠ ರಸ್ತೆಗಳಲ್ಲಿ ಎರಡೂ ಬದಿಗಳಲ್ಲಿಯೂ ಹೆಚ್ಚಿನ ಸಂಖ್ಯೆಯ ಅಂಗಡಿ ಮುಂಗಟ್ಟುಗಳಿವೆ. ಜೊತೆಗೆ ವಾಹನ ಸಂಚಾರ ಮತ್ತು ಸಾರ್ವಜನಿಕರ ಓಡಾಟವೂ ಹೆಚ್ಚಿರುವುದರಿಂದ ಸಂಚಾರ ದಟ್ಟಣೆ ಉಂಟಾಗಿ ತೊಂದರೆಯಾಗುತ್ತಿತ್ತು. ಈ ಬಗ್ಗೆ ಜನರ ಅಭಿಪ್ರಾಯ ಸಂಗ್ರಹ ಮಾಡಲಾಗಿದ್ದು, ಶೇ 86ರಷ್ಟು ಮಂದಿ ಏಕಮುಖ ಸಂಚಾರ ಬೆಂಬಲಿಸಿದ್ದಾರೆ.

ನಗರದ ಪಿಂಪಳ ಕಟ್ಟಾದಿಂದ ಕರ್ನಾಟಕ ಚೌಕ ಮಾರ್ಗವಾಗಿ ನರಗುಂದಕರ ಭಾವೆ ಚೌಕದವರೆಗೆ ಪೂರ್ವದಿಂದ ಪಶ್ಚಿಮ ದಿಕ್ಕಿಗೆ ಸಾಗುವ ರವಿವಾರ ಪೇಟೆ ರಸ್ತೆ ಹಾಗೂ ನರಗುಂದಕರ ಭಾವೆ ಚೌಕದಿಂದ ಪಿಂಪಳ ಕಟ್ಟಾ ಕಡೆಗೆ ಪಶ್ಚಿಮದಿಂದ ಪೂರ್ವ ದಿಕ್ಕಿಗೆ ಸಾಗುವ ಕಲ್ಮಠ ರಸ್ತೆಯನ್ನು ಏಕಮುಖ ಸಂಚಾರ ರಸ್ತೆಗಳಾಗಿ ಪರಿವರ್ತಿಸಲಾಗಿದೆ. ಸಾರ್ವಜನಿಕರು ಕಡ್ಡಾಯವಾಗಿ ನಿಯಮ ಪಾಲಿಸಬೇಕು ಎಂದು ಕಮಿಷನರ್ ತಿಳಿಸಿದ್ದಾರೆ.

ಚಿತ್ರಾವಳಿ

ಸಿಇಟಿ ಪರೀಕ್ಷೆಯಲ್ಲಿ ಜನಿವಾರ ತೆಗೆದಿದ್ದನ್ನು ಖಂಡಿಸಿ ಅದಕ್ಕೆ ಕಾರಣರಾದವರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಸಂಕೇಶ್ವರದ ಬ್ರಾಹ್ಮಣ ಸಂಘದ ವತಿಯಿಂದ ಉಪತಹಶೀಲ್ದಾರ್ ಸಿ.ಬಿ.ಪಾಟೀಲ ಅವರಿಗೆ ಗುರುವಾರ ಮನವಿ ಸಲ್ಲಿಸಲಾಯಿತು

ಪಿಯುಸಿ ಕಲಾ ವಿಭಾಗದಲ್ಲಿ ಶೇ 96.34 ಅಂಕ ಪಡೆದ ಬೈಲಹೊಂಗಲ ಬಾಪೂಜಿ ಕಾಲೇಜಿನ ವಿದ್ಯಾರ್ಥಿನಿ ಭಾಗ್ಯಲಕ್ಷ್ಮಿ ಮಹಾಲಿಂಗಪೂರ ಅವರನ್ನು ಅವರ ಸ್ವಗ್ರಾಮವಾದ ಯರಗಟ್ಟಿ ಸಮೀಪದ ತವಲಗೇರಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಸನ್ಮಾನಿಸಲಾಯಿತು. ಎಸ್.ಡಿ.ಹೊಸಮನಿ, ಎಂ.ಬಿ. ಯಕ್ಕಂಡಿ, ಎಸ್.ಜೆ. ಮರಕುಂಬಿ, ನಂದಿ, ಎಸ್‌ಡಿಎಂಸಿ ಅಧ್ಯಕ್ಷ ಮಾರುತಿ ಅಜ್ಜನಕಟ್ಟಿ, ಲಂಕೇಶ ಮೇತ್ರಿ, ವಿ.ಎನ್. ಕೋಲಕಾರ, ಗಂಗಾಧರ ಉಳ್ಳಾಗಡ್ಡಿ, ಯಮನಪ್ಪ ಭಾಗವಹಿಸಿದ್ದರು

ಹುಕ್ಕೇರಿ ತಾಲ್ಲೂಕಿನ ಮಾವನೂರ ಗ್ರಾಮದಲ್ಲಿ ಚಿಕ್ಕೋಡಿ ಜಿಲ್ಲಾ ವಿಶ್ವ ಹಿಂದೂ ಪರಿಷತ್ ಉಪಾಧ್ಯಕ್ಷರಾಗಿ ನೇಮಕಗೊಂಡ ಯಮಕನಮರಡಿಯ ಮುಖಂಡ ರವಿ ಹಂಜಿ ಅವರನ್ನು ಯುವಕರು ಸತ್ಕರಿಸಿದರು. ಸತೀಶ್ ಕಮತಗಿ, ಸಂಜು ಮುಸಲ್ಮಾರಿ, ಆನಂದ ಗಡದ, ಶಿವನಗೌಡ ಪಾಟೀಲ, ಶಿವಾನಂದ ಹಿರೇಮಠ ಹಾಜರಿದ್ದರು

ನಿಧನ ವಾರ್ತೆ

ಸುವರ್ಣ ನಾಯಿಕ

ಹುಕ್ಕೇರಿ: ತಾಲ್ಲೂಕಿನ ಬೆಳವಿ ಗ್ರಾಮದ ಲಿಂಗಾಯತ ಸಮಾಜದ ಮುಖ್ಯಸ್ಥೆ, ಸುವರ್ಣ ಅಜೀತಕುಮಾರ ನಾಯಿಕ (56) ಬುಧವಾರ ನಿಧನರಾದರು.

ಅವರಿಗೆ ಪತಿ ಹಾಗೂ ಪತ್ರಕರ್ತ ವಿಶ್ವನಾಥ ನಾಯಿಕ ಸೇರಿದಂತೆ ಇಬ್ಬರು ಪುತ್ರರು ಇದ್ದಾರೆ.

ಜಯರಾಮ ಕೋಣಿ

ರಾಮದುರ್ಗ: ಇಲ್ಲಿನ ಕಾಶಿ ಪೇಟೆ ನಿವಾಸಿ ಜಯರಾಮ ಹ. ಕೋಣಿ (76) ಅವರು ಧಾರವಾಡದ ಆಸ್ಪತ್ರೆಯಲ್ಲಿ ಗುರುವಾರ ನಿಧನರಾದರು.

ಅವರಿಗೆ ಪತ್ನಿ, ಪುತ್ರ, ಇಬ್ಬರು ಪುತ್ರಿಯರು ಇದ್ದಾರೆ.

ಜಗದೀಶ ಹೊಸಟ್ಟಿಮಠ

ಗೋಕಾಕ: ಇಲ್ಲಿನ ಬಣಗಾರ ಓಣಿ ನಿವಾಸಿ ಎಲ್.ಐ.ಸಿ ಪ್ರತಿನಿಧಿ ಜಗದೀಶ ಶಂಕ್ರಯ್ಯ ಹೊಸಟ್ಟಿಮಠ (47) ಗುರುವಾರ ನಿಧನರಾದರು.

ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ.

ಸುರೇಶ ಮುರಗೋಡ

ಹಂದಿಗುಂದ: ಇಲ್ಲಿನ ಸುರೇಶ ಬಸವಂತಪ್ಪ ಮುರಗೋಡ (70) ಅನಾರೋಗ್ಯದಿಂದ ಗುರುವಾರ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ.

ಜಿಲ್ಲಾ ಪಂಚಾಯತ, ಧಾರವಾಡ
ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ,
ಶಾಲಾ ಶಿಕ್ಷಣ ಇಲಾಖೆ, ಕಲಘಟಗಿ.
E-mail: beokalghatagi187@gmail.com Ph: 08370-284553.
ಸಂಖ್ಯೆ: ಕ್ಷೇ.ಶಿ.ಕ/ಅ2/ಕ.ಹೊ.ಗು.ವಾ/ವಿವ-08/2026-27 ದಿನಾಂಕ : 24.04.2026

ಟೆಂಡರ್ ಪ್ರಕಟಣೆ

ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಕಲಘಟಗಿ ಇವರ ದೈನಂದಿನ ಕಚೇರಿ ಕೆಲಸಕ್ಕೆ ಉಪಯೋಗಿಸಲು ಈ ಕೆಳಗಿನ ಮಾದರಿಯ ಬಾಡಿಗೆ ವಾಹನವನ್ನು 2026-27 ನೇ ಸಾಲಿಗೆ ಮಾಸಿಕ ಬಾಡಿಗೆ ದರ ಪಟ್ಟಿ ಆಧಾರದ ಮೇಲೆ ಪಡೆಯಬೇಕಾಗಿದೆ.

1) ಸ್ವಿಪ್ಟ್ ಡಿಜೈರ್ ವಿಥ್ ಎಸಿ 2) ಆಯ್-20 ವಿಥ್ ಎಸಿ 3) ಕ್ರೇಟಾ ವಿಥ್ ಎಸಿ 4) ಟಾಟಾ ಸುಮೋ ಗೋಲ್ಡ 5) ಎರ್ಟಿಗಾ ವಿಥ್ ಎಸಿ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 2000 ರನ್ವಯ ಈ ಕೆಳಗಿನ ನಿಬಂಧನೆಗಳ ಷರತ್ತುಗಳಿಗೆ ಒಳಪಟ್ಟು ದರಪಟ್ಟಿಯನ್ನು ಆಹ್ವಾನಿಸಲಾಗಿದೆ. ಕಾರಣ ವಾಹನ ಸೇವೆ ಒದಗಿಸುವ ಸಂಸ್ಥೆಯವರು ತಮ್ಮ ದರಪಟ್ಟಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಕಲಘಟಗಿ ಕಛೇರಿಗೆ ಸಲ್ಲಿಸಬಹುದಾಗಿದೆ.

1) ಗುತ್ತಿಗೆ ಅವಧಿ ದಿನಾಂಕ: 01.06.2026 ರಿಂದ ದಿನಾಂಕ: 31.03.2027 ರವರೆಗೆ ಮಾತ್ರ, 2) ಟೆಂಡರ್ ಫಾರ್ಮಗಳನ್ನು ದಿನಾಂಕ: 02.05.2026 ರಿಂದ ದಿನಾಂಕ: 16.05.2026 ರವರೆಗೆ ಕಛೇರಿ ವೇಳೆಯಲ್ಲಿ ರೂ.300/- ಡಿ.ಡಿ ರೂಪದಲ್ಲಿ ಶುಲ್ಕ ಪಾವತಿಸಿ ಪಡೆಯಬಹುದು. 3) ಭರ್ತಿ ಮಾಡಿದ ದರ ಪಟ್ಟಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 16.05.2026 ರ ಸಾಯಂಕಾಲ 5.00 ಘಂಟೆಯೊಳಗೆ ಸಲ್ಲಿಸಬೇಕು ಅವಧಿಯ ನಂತರ ಸ್ವೀಕರಿಸಲಾಗುವುದಿಲ್ಲ. 4) ಟೆಂಡರ್‌ಗಳನ್ನು ದಿನಾಂಕ: 18.05.2026 ರ ಕಛೇರಿಯ ಅವಧಿಯ ನಂತರ ತೆರೆಯಲಾಗುವುದು. ವಾಹನ ಚಾಲಕರ ಎಲ್ಲ ದಾಖಲಾತಿಗಳು ಚಾಲ್ತಿಯಲ್ಲಿರಬೇಕು. 5) ಟೆಂಡರ್ ಮಂಜೂರಾದ ಸಂಸ್ಥೆಯ ಮಾಲಿಕರು ಪ್ರತಿಯೊಂದು ವಾಹನಕ್ಕೆ ಟೆಂಡರ್ ಪ್ರಸ್ತಾವನೆಯೊಂದಿಗೆ ರೂ.6000/- ಇ.ಎಂ.ಡಿ ಮೊತ್ತ ಡಿ.ಡಿ ರೂಪದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಕಲಘಟಗಿ ಇವರಿಗೆ ಸಂದಾಯವಾಗುವಂತೆ ಸಲ್ಲಿಸುವುದು.

ಹೆಚ್ಚಿನ ಮಾಹಿತಿಗಾಗಿ ಕಛೇರಿ ಕೆಲಸದ ದಿನಗಳಲ್ಲಿ ಸಂಪರ್ಕಿಸಬಹುದಾಗಿದೆ. ದೂರವಾಣಿ ಸಂಖ್ಯೆ- 08370-284553, 94806 95187, 90351 04264.

ವಾಸಾಸಂಇ/ಧಾ/ಡಿಶಾ/ 104/2026-27 — ಕ್ಷೇತ್ರ ಶಿಕ್ಷಣಾಧಿಕಾರಿಗಳು ಕಲಘಟಗಿ, ಜಿ:ಧಾರವಾಡ

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ: ಬೆಳಗಾವಿ ವಿಭಾಗ ಬೆಳಗಾವಿ
ಸಂಖ್ಯೆ:ವಾಕರಸಾ:ಬೆವಿ:ಸಂ:ವಾಣಿಜ್ಯ: 954, 955 ದಿನಾಂಕ:28-04-2026.

ಇ-ಟೆಂಡರ್ ಪ್ರಕರಣೆ ಸಂಖ್ಯೆ-05/2026
ಸಂಧಾನ ಪ್ರಕರಣೆ ಸಂಖ್ಯೆ-06/2026

ವಾ.ಕ.ರ.ಸಾ. ಸಂಸ್ಥೆಯ ಬೆಳಗಾವಿ ವಿಭಾಗದ ವ್ಯಾಪ್ತಿಗೆ ಬರುವ ವಿವಿಧ ಬಸ್ ನಿಲ್ದಾಣಗಳಲ್ಲಿನ ವಾಣಿಜ್ಯ ಮಳಿಗೆಗಳಿಗೆ ಪರವಾನಿಗೆದಾರರನ್ನು ಆಯ್ಕೆ ಮಾಡಲು ದಿನಾಂಕ:28-04-2026 ರಿಂದ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಹಾಗೂ ಮ್ಯಾನುವಲ್ ಸಂಧಾನದ ಮೂಲಕ ಟೆಂಡರ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಇ-ಟೆಂಡರ್ ದಸ್ತಾವೇಜಗಳನ್ನು ದಿನಾಂಕ:18-05-2026 ರಂದು 17.00 ಗಂಟೆಯ ವರೆಗೆ ಕೆಪಿಪಿಪಿ ವೆಬ್ ಸೈಟ್ ವಿಳಾಸ www.kppp.karnataka. gov.in ಮೂಲಕ ಡೌನಲೋಡ್ ಮಾಡಿಕೊಳ್ಳಬಹುದು. ದಿನಾಂಕ:18-05-2026 ರಂದು 17.00 ಗಂಟೆಯವರೆಗೆ ಆನ್ ಲೈನ್ ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕವಾಗಿದ್ದು, ಇ-ಟೆಂಡರ್ ದಿನಾಂಕ:20-05-2026 ರಂದು 11.00 ಗಂಟೆಗೆ ತೆರೆಯಲಾಗುವುದು. ಹಾಗೂ ಮ್ಯಾನುವಲ್ ಸಂಧಾನದ ಅರ್ಜಿಗಳನ್ನು ಪಡೆಯಲು ದಿನಾಂಕ:21-05-2026 ರಂದು 17.00 ಗಂಟೆಯವರೆಗೆ ಸಮಯಾವಕಾಶವಿದ್ದು, ದಿನಾಂಕ:22-05-2026 ರಂದು 12.00 ಗಂಟೆಗೆ ವಿಭಾಗೀಯ ಕಛೇರಿ ಬೆಳಗಾವಿಯಲ್ಲಿ ಸಂಧಾನ ನಡೆಸಲಾಗುವುದು. ಅದೇ ರೀತಿ ಬೆಳಗಾವಿ ನಗರ ಸಾರಿಗೆ ಬಸ್ ನಿಲ್ದಾಣದ (C.B.T)1,2&3ನೇ ಮಹಡಿಗಳ "Operation and Maintenance of Commercial-Cum-Retail Space" ನಿರ್ವಹಣೆ ಯನ್ನು "as is where is basis" ಮೇಲೆ ನಿರ್ವಹಿಸಲು Single Agency ಮೂಲಕ ಪರವಾನಿಗೆದಾರರ ಆಯ್ಕೆ ಟೆಂಡರ್ ಆಹ್ವಾನಿಸಲಾಗಿದ್ದು, ವಿವರ ಕೆಳಗಿನಂತಿದೆ.

Description	Date	Time
Last date for submission of queries	02.05.2026	13:00 Hrs
Pre-Bid meeting date	06.05.2026	11:00Hrs
Last date of Submission for Bids	17.05.2026	13:00 Hrs
Last date of Submission of DD's (E.M.D)	21.05.2026	17:00Hrs
Opening of Technical Bid	25.05.2026	11:00Hrs
Opening of Financial Bid	29.05.2026	11:00Hrs

ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ವಾ.ಕ.ರ.ಸಾ.ಸಂಸ್ಥೆ, ಬೆಳಗಾವಿ ವಿಭಾಗ ಬೆಳಗಾವಿಯವರನ್ನು ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ಮೊಬೈಲ್ ಸಂಖ್ಯೆ.7760991634/8073286881 (ವಿಷಯ ನಿರ್ವಾಹಕರು).

ಸಹಿ/-ವಿಭಾಗೀಯ ನಿಯಂತ್ರಣಾಧಿಕಾರಿ, ವಾಕರಸಾ ಸಂಸ್ಥೆ: ಬೆಳಗಾವಿ
PP/SAP/NWKRTC/2026-27

Arunodaya Developers
9740154223
NA, KJP & DEVELOPED PLOTS FOR SALE IN DHARWAD
1) Agriculture University Back Side, Yettinagudda.
2) J.S.S. College Near, Savadatti Road, Dharwad

CHANGE OF NAME
I, Sandeep Sadanand Sahapurkar, R/o. H.No. CCB 384, Plot No. 27/C, 4th Cross, Subhash Chandra Nagar, Tilakwadi, Angol Extn., Belagavi-590006, have changed my name from SANDEEP SHAHAPURKAR (Old Name) to SANDEEP SADANAND SHAHAPURKAR (New Name) vide affidavit dated: 30-04-2026 sworn before Advocate & Notary Geeta D. Hireholi at Belagavi

ಭಾರತೀಯ ಸ್ಟೇಟ್ ಬ್ಯಾಂಕ್
ಅಧಿಕೃತ ಅಧಿಕಾರಿಯವರ ವಿವರ : ಹೆಸರು : ಶ್ರೀ ನೀರಜ್ ಕುಮಾರ ಸಿಂಗ್ ಮೊಬೈಲ್ : 76249 52555 ದೂರವಾಣಿ : 0831-2401396/2406557/2406556
ಮುಖ್ಯ ರಸ್ತೆ, ಮಲ್ಲಾಪುರ ಪಿ ಜಿ ಶಾಖೆ (13402) ಘಟಪ್ರಭಾ - 591 306, ತಾಲ್ಲೂಕು : ಗೋಕಾಕ ಜಿಲ್ಲೆ : ಬೆಳಗಾವಿ | ದೂರವಾಣಿ ಸಂಖ್ಯೆ 88790 24606 ಇಮೇಲ್ ಐಡಿ Sbi.13402@sbi.co.in
ಅಪೆಂಡಿಕ್ಸ್ IV A(ನಿಯಮ 8(6) ರ ಅನ್ವಯ)
ಸ್ಥಿರಾಸ್ತಿ ಮಾರಾಟಕ್ಕಾಗಿ ಮಾರಾಟ ಸೂಚನೆ
ಸೆಕ್ಯೂರಿಟೈಜೇಷನ್ ಆ್ಯಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಆ್ಯಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆ್ಯಕ್ಟ್ 2002 ಮತ್ತು ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು 2002ರ ನಿಯಮ 8(6) ರ ನಿಬಂಧನೆಗಳನ್ನು ಓದಿಕೊಂಡಂತೆ ಇದರ ಅನ್ವಯ ಸ್ಥಿರಾಸ್ತಿಯ ಇ-ಹರಾಜು ಮಾರಾಟ ಸೂಚನೆ.
ನಿರ್ದಿಷ್ಟವಾಗಿ ಈ ಕೆಳಕಂಡ ಸಾಲಗಾರರಿಗೆ । ಜಾಮೀನುದಾರರಿಗೆ । ಅಡಮಾನುದಾರರಿಗೆ ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸೆಕ್ಯೂರ್ ಕ್ರೆಡಿಟರ್‌ರಾದ ಭಾರತೀಯ ಸ್ಟೇಟ್ ಬ್ಯಾಂಕ್ ಇವರಿಗೆ ಅಡಮಾನ । ಚಾರ್ಜ್ ಮಾಡಿರುವ ಈ ಕೆಳಗೆ ವಿವರಿಸಿರುವ ಆಸ್ತಿಯನ್ನು ಬ್ಯಾಂಕಿನ ಅಧಿಕೃತ ಅಧಿಕಾರಿಯವರು ದಿನಾಂಕ: 09-09-2025 ರಂದು ಭೌತಿಕ / ರಚನಾತ್ಮಕವಾಗಿ ಸ್ವಾಧೀನಕ್ಕೆ ಪಡೆದುಕೊಂಡಿದ್ದು, ಇದನ್ನು "ಎಲ್ಲಿ ಹೇಗಿದೆಯೋ ಹಾಗೆ", "ಎಲ್ಲಿ ಏನಿದೆಯೋ ಹಾಗೆ" ಮತ್ತು "ಯಾವ್ಯಾವುದಾದರೂ ಅಲ್ಲಿ ಇದ್ದಲ್ಲಿ" ಆಧಾರದ ಮೇಲೆ ಭಾರತೀಯ ಸ್ಟೇಟ್ ಬ್ಯಾಂಕ್ ಇವರಿಗೆ ಸಾಲಗಾರರಾದ । ಜಾಮೀನುದಾರರಾದ । ಅಡಮಾನುದಾರರಾದ ಶ್ರೀ. ಶಿವಪುತ್ರ ಶಿದ್ರಾಮ ಕಲ್ಲೋಳಿ ವಾಸ ಮಲ್ಲಾಪುರ ಪಿ.ಜಿ ಇವರಿಂದ ಬರಬೇಕಾದ ಬಾಕಿ ಮೊತ್ತ 21-06-2025 ರಂತೆ ರೂ.10,54,366/- (ರೂಪಾಯಿಗಳು ಹತ್ತು ಲಕ್ಷ ಐವತ್ತನಾಲ್ಕು ಸಾವಿರದ ಮುನ್ನೂರ ಅರವತ್ತಾರು) ಮತ್ತು ಬಡ್ಡಿ, ವಿಚ್ಚ, ವೆಚ್ಚ ಇತ್ಯಾದಿ ಮತ್ತು ಮುಂದಿನ ಬಡ್ಡಿ ಮತ್ತು ಇತರ ಖರ್ಚು, ವೆಚ್ಚಗಳ ವಸೂಲಿಗಾಗಿ ದಿನಾಂಕ : 15-05-2026 ರಂದು (ಸಮಯ : ಬೆಳಗ್ಗೆ 11.00 ರಿಂದ ಸಂಜೆ 4.00 ಗಂಟೆಯವರೆಗೆ, ಬಿಡ್ ಮುಂದುವರಿದರೆ ಮಾರಾಟವು ಮುಕ್ತಾಯವಾಗುವವರೆಗೆ ಪ್ರತಿ ಬಿಡ್‌ಗೆ 10 ನಿಮಿಷಗಳ ಅನಿಯಮಿತ ವಿಸ್ತರಣೆಯೊಂದಿಗೆ) ಮಾರಾಟ ಮಾಡಲಾಗುವುದು.

ಟೆಂಡರ ಸಂಖ್ಯೆ : SBI / RASMECC/BGM/SARF/8/2025-26	
ಮೀಸಲು ಬೆಲೆ (ಈ ಮೊತ್ತಕ್ಕಿಂತ ಕಡಿಮೆಗೆ ಆಸ್ತಿಯನ್ನು ಮಾರಾಟ ಮಾಡಲಾಗುವುದಿಲ್ಲ)	ರೂ. 21,62,000/-
ಮುಂಗಡ ಠೇವಣಿ (ಇಎಂಡಿ)	ರೂ. 2,16,200/-
ಬಿಡ್ ಗುಣಾಂಕ	ರೂ. 10,000/-

: ಸ್ಥಿರಾಸ್ತಿ ವಿವರ :
ಶಿವಪುತ್ರ ಶಿದ್ರಾಮ್ ಕಲ್ಲೋಳಿ ಸಾ: ಮಲ್ಲಾಪುರ ಪಿಜಿ ಇವರ ಹೆಸರಿನಲ್ಲಿರುವ ಗೋಕಾಕ್ ಮತ್ತು ಜಿಲ್ಲೆ ಬೆಳಗಾವಿ ಸಬ್-ರಿಜಿಸ್ಟ್ರಾರ್ ಗೋಕಾಕ್ ವ್ಯಾಪ್ತಿಯಲ್ಲಿರುವ, ಪಟ್ಟಣ ಪಂಚಾಯ್ತಿ, ಮಲ್ಲಾಪುರ ಪಿಜಿ ಮಿತಿಯಲ್ಲಿರುವ, ಮಲ್ಲಾಪುರ ಪಿಜಿ, ವಾರ್ಡ್ ಸಂಖ್ಯೆ: 13, ರಿ.ಸ. ಸಂಖ್ಯೆ 6/1, ಪ್ಲಾಟ್ ಸಂಖ್ಯೆ 133, ಪಟ್ಟಣ ಪಂಚಾಯತ ಸಂಖ್ಯೆ 1926/2. ಕೃಷಿಯೇತರ ಭೂಮಿ ವಿಸ್ತೀರ್ಣ: 47*11 ಚದರ ಅಡಿ ಅಳತೆ ಒಟ್ಟು 517 ಚದರ ಅಡಿ. ಸ್ವತ್ತಿನ ಚಕ್ಕುಬಂದಿ: ಪೂರ್ವ: ರಸ್ತೆ, ಪಶ್ಚಿಮ: ಬಂಗಿದೋಲ್, ಉತ್ತರ: ಗಂಗವ್ವ ಲಕ್ಷ್ಮಣ ಪಾಟೀಲ್ ಅವರ ಆಸ್ತಿ, ದಕ್ಷಿಣ: ಪ್ಲಾಟ್ ಸಂಖ್ಯೆ 132.
(Sale Deed No. GKK – 1-06236-2017-18 C.D.No.GKKD388 dtd., 09.08.2017)
(MOTD No. GKK1-10087-2017-18 C.D.No.GKKD395 dtd,. 17.11.2017.)
ಮುಂಗಡ ಠೇವಣಿಯನ್ನು (ಇಎಂಡಿ) ಪಾವತಿಸುವ ಕೊನೆಯ ದಿನಾಂಕ ಮತ್ತು ಸಮಯ : 14-05-2026, ಸಂಜೆ 4 ಗಂಟೆವರೆಗೆ
ಮೃತ್ಯುಂಜಯ ಇನ್‌ಸ್ಪೆಕ್ಟರ್, ಶ್ರೀ ಅಶೋಕ ನರೇಗಲ್, ಮೊಬೈಲ್ ಸಂಖ್ಯೆ 9448609287 ಇವರನ್ನು ದಿನಾಂಕ 13-05-2026 ಬೆಳಗ್ಗೆ 11.00 ರಿಂದ ಸಂಜೆ 5.00 ಗಂಟೆವರೆಗೆ ಸಂಪರ್ಕಿಸಿ ಆಸ್ತಿಯನ್ನು ಪರಿಶೀಲಿಸಬಹುದು.
ಮೇಲ್ಕಂಡ ಹರಾಜಿಗೆ ಸಂಬಂಧಿಸಿದ ಷರತ್ತು ಮತ್ತು ನಿಬಂಧನೆಗಳ ವಿವರಗಳಿಗೆ ಸೆಕ್ಯೂರ್ಡ್ ಕ್ರೆಡಿಟರ್ ಆದ ಭಾರತೀಯ ಸ್ಟೇಟ್ ಬ್ಯಾಂಕ್, ಇವರ ವೆಬ್‌ಸೈಟ್ www.sbi.co.in ಮತ್ತು https://baanknet.com
ಸ್ಥಳ : ಬೆಳಗಾವಿ ದಿನಾಂಕ : 29-04-2026 — ಸಹಿ/- ಅಧಿಕೃತ ಅಧಿಕಾರಿ ಭಾರತೀಯ ಸ್ಟೇಟ್ ಬ್ಯಾಂಕ್